3

# ಅಧಿಕಾರಯುಕ್ತವಾದ ದೈವೀಕ ನೀತಿ

ನೀವು ಈಗ ಒಂದು ಕ್ಷಣಕಾಲ ಆದಾಮ ಅಥವಾ ಹವ್ವಳಾಗಿದ್ದೀರಿ ಎಂದು ಭಾವಿಸಿಕೊಳ್ಳಿರಿ, ನೀವು ನೋಡುವಲೆಲ್ಲಾ ಸೌಂದರ್ಯವನ್ನೆ ನೋಡುತ್ತಿರುವಿರಿ. ಜೀವನ ಸರಳವಾಗಿ; ನಿಮ್ಮ ಸಕಲ ಕೊರತೆಗಳು ನೀಗಲ್ಪಟ್ಟಿವೆ. ನೀವು ದೇವರ ಕುರಿತು ತಿಳಿದಿರುವುದು ಮಾತ್ರವಲ್ಲ. ಭರವಸವುಳ್ಳ ಮತ್ತು ಹತ್ತಿರದ ಸ್ನೇಹತನೊಂದಿಗಿನ ಸಂಬಂಧದಂತೆ ದೇವರೊಂದಿಗಿರುವಿರಿ. ದೇವರ ಈ ಸಂಬಂಧದಲ್ಲಿ ನೀವು ಆತನ ಸೃಷ್ಟಿಯ ಕಿರೀಟವಾಗಿದ್ದೀರಿ, ಮತ್ತು ಆತನೇ ನಿಮ್ಮ ಸೃಷ್ಟಿ ಕರ್ತನು ಎಂದು ತಿಳಿದಿರುವಿರಿ. ನಿಮ್ಮನ್ನು ಆತನು ಉಂಟುಮಾಡಿದ ನಂತರ ಆತನ ಸೃಷ್ಟಿಯು "ಒಳ್ಳೆಯದೇ ಆಗಿತ್ತು" (ಆದಿಕಾಂಡ 1:31). ಆತನು ಸೃಷ್ಟಿಕರ್ತನಾಗಿದ್ದು, ಆತನು ಉಂಟು ಮಾಡಿರುವ ಪರದೇಶದಲ್ಲಿ ಆನಂದವನ್ನೂ ಹೊಂದಬಹುದಾಗಿದೆ. ಇದು ಸರಳವಾದ ಅಗತ್ಯತೆಗಳಾಗಿವೆ, ಅದು ನಿಜವೇ. ಸೃಷ್ಟಿಯಲ್ಲಿನ ನಿಮ್ಮ ಪಾತ್ರವನ್ನು ನೀವು ಅರಿಯಬೇಕು. ಪರದೇಶದಲ್ಲಿದ್ದು, ಅದರ ಫಲವನ್ನು ಆನಂದಿಸುವುದು - ಎಲ್ಲಾ ಫಲವನ್ನು, ಆದರೆ ಒಳ್ಳೆದರ ಕೆಟ್ಟದರ ಹೊರತುಪಡಿಸಿ, ಅದನ್ನು ಯಾವುದೇ ಪರಿಸ್ಥಿತಿಯಲ್ಲು ತಿನ್ನುವುದು. ಸರಳವಾದದ್ದು ಯಾವುದು?

ನಂತರ, ವ್ಯತ್ಯಾಸವುಳ್ಳ ಇನ್ನೊಂದು ಚಿತ್ರಣದ ಊಹೆಯನ್ನು ಮಾಡಿಕೊಳ್ಳಿರಿ. ಪ್ರವಾಹದ ದಿನಗಳು ಕಳೆದ ನಂತರ ನೋಹನ ದಿವಸಗಳಲ್ಲಿ ಜೀವಿಸಿದ ಜನರು ನೀವೆಂದು ಊಹಿಸಿರಿ, ನೋಹ ಮತ್ತು ಅವನ ಕುಟುಂಬವನ್ನು ಹೊರತುಪಡಿಸಿ, ಇತರೆ ಪ್ರಪಂಚವನ್ನು ದೇವರು ನಾಶಮಾಡಿದನು. ಅವರ ದುಷ್ಟತನವು ದೇವರು ಸಹಿಸಲಾರದಾಯಿತು. ಅಕ್ಷರಶಃ ಮತ್ತು ನೈತಿಕವಾಗಿ, ಜಲಪ್ರಳಯವು ಲೋಕವನ್ನು ಶುದ್ಧಪಡಿಸಿತ್ತು, ಮತ್ತು ನೋಹನಲ್ಲಿ ನೂತನವಾದ ಸಂಗತಿ ಪ್ರಾರಂಭವಾಗಿತ್ತು, ಎಲ್ಲರಿಗಿಂತಲೂ ವಿಭಿನ್ನವಾದ ವ್ಯಕ್ತಿಯಾಗಿದ್ದನು, ಆದರೆ ಅವನ ಮಾತನ್ನು ಯಾರು ಕೇಳಲಿಲ್ಲ (2 ಪೇತ್ರ 2:5 ನೋಡಿರಿ). ದೇವರು ಅವಿಧೇಯತೆಯನ್ನು ಎಂದಿಗೂ ಸಹಿಸುವವನಲ್ಲ, ಇದನ್ನು ನೀವು ತಿಳಿದಿರುವಿರಿ. ನೋಹನ ಚರಿತ್ರೆಯ ಮೂಲಕ ದೇವರು ಮಾನವರ ಸಂಬಂಧವನ್ನು ಬಯಸುವನು ಎಂದು ತಿಳಿಯುವುದು. ನೋಹನು ನೀತಿವಂತನಾಗಿದ್ದನು, ಆದರೆ ಪಾಪರಹಿತನಾಗಿರಲಿಲ್ಲ. ಆದಾಗ್ಯೂ ಅವನ ಮೂಲಕ ದೇವರು ಮಾನವನಿಗೆ ಎರಡನೆಯ ಅವಕಾಶವನ್ನು ನೀಡಿದನು. ಶುದ್ಧವಾದ ಭೂಮಿಯಲ್ಲಿ, ನೂತನ ಪ್ರಾರಂಭ ಉಂಟಾಯಿತು, ಅವರ ಹಿಂದಿನವರ ತಪ್ಪುಗಳಿಂದ ಕಲಿಯುವಂತ ಒಂದು ಅವಕಾಶವು ದೊರೆಯಿತು.

ಈ ಎರಡು ಕಥೆಗಳು ಆದಿಕಾಂಡದ ಮೊದಲ ಹನ್ನೊಂದು ಅಧ್ಯಾಯಗಳಲ್ಲಿ ದಾಖಲಾಗಿವೆ. ಒಂದೇ ಮಾರ್ಗದ ಎರಡು ತುದಿಗಳು ಮಹಿಮೆಯುಳ್ಳ ನೂತನವಾದ ಆರಂಭದ ಆಶೀರ್ವಾದವಿದ್ದರೂ, ಜನರು ದೇವರ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳ ಲಿಲ್ಲ. ಆದಾಮ ಮತ್ತು ಹವ್ವಳು ತಿನ್ನಬಾರದ ಹಣ್ಣನ್ನು ತಿಂದು, ದೇವರು ಉಂಟು ಮಾಡುವ ಮರಣವು ನಿಶ್ಚಯ ಎಂದು ತಿಳಿದರು (ಆದಿಕಂಡ 3:1-24). ಜಲಪ್ರಳಯದ ನಂತರ ನೂತನ ಜೀವಿತವನ್ನು ಪ್ರಾರಂಭಿಸಲು ಅವಕಾಶ ನೀಡಲಾಗಿದ್ದರೂ, ಜನರು ತಮ್ಮ ಮಹಿಮೆಗಾಗಿಯೇ ಬೇಗನೆ ಕಾತರಗೊಂಡರು, ಮತ್ತು ದೇವರ ನಾಮವನ್ನು ಗೌರವಿಸಲಿಲ್ಲ. ಮಾನವರ ಪರಲೋಕಕ್ಕೆ ಏರಲು ಒಂದು ಗೋಪುರವನ್ನು ನಿರ್ಮಿಸಿ, ದೇವರ ಅಧಿಕಾರಕ್ಕೆ ಅಧೀನರಾಗಲಿಲ್ಲ (ಆದಿಕಾಂಡ 11:1-9).

ಅವಿಧೇಯತೆಯ ಪ್ರಾಥಮಿಕ ಚರಿತ್ರೆಯು ಹಳೇ ಒಡಂಬಡಿಕೆಯಲ್ಲಿ ಮುಂದುವರಿಯುತ್ತದೆ. ದೇವರು ಅಬ್ರಾಮನನ್ನು ಆರಿಸಿಕೊಂಡನು, ಅವನಿಗೆ ಒಬ್ಬ ಮಗನನ್ನು ವಾಗ್ದಾನ ಮಾಡಿದನು, ವಾಗ್ದಾನದ ಸ್ಥಳವನ್ನು ಮತ್ತು ಸ್ವಾಸ್ತ್ಯವನ್ನು ವಾಗ್ದಾನ ಮಾಡಿದನು. ನಂತರ ಅಬ್ರಾಮನು ಅಬ್ರಾಹಾಮನಾದನು, ಅವನು ದೇವರನ್ನು ವಿಶ್ವಾಸಿಸಲು ಕಲಿತನು. ಅವನು ಒಬ್ಬ ಮಗನಿಗಾಗಿ ಇಪ್ಪತ್ತೈದು ವರ್ಷಗಳ ಕಾಲ ಕಾದನು, ಅಬ್ರಾಹಾಮನು ದೇವರ ಮೇಲೆ ಭರವಸವಿಡದೆ, ತನ್ನಲ್ಲಿ ಭರವಸವುಳ್ಳವನಾಗಿದ್ದನು.

ಅಬ್ರಾಹಾಮನ ಸಂತತಿಯಾದ ಇಸ್ಸಾಕ ಮತ್ತು ಯಾಕೋಬರ ಮೂಲಕವಾಗಿ ದೇವರು ತನ್ನ ವಾಗ್ದಾನಗಳನ್ನು ಮುಂದುವರಿಸಿದನು, ಅದೇ ವಿಧವಾದ ಯೋಜನೆಗಳನ್ನು ತೋರಿಸಿದನು; ಆದರೂ ಅವರನ್ನು ಆತನು ಕೈ ಬಿಡಲಿಲ್ಲ. ದೇವರು ಇವರ ಸಂತಾನದವರಲ್ಲಿಯೂ ಕಾರ್ಯವನ್ನು ಮುಂದುವರಿಸಿದನು, ಯಾಕೋಬನ ಹತ್ತು ಜನ ಮಕ್ಕಳು ತಮ್ಮ ಸಹೋದರನನ್ನು ಗುಲಾಮಗಿರಿಗೆ ಮಾರಿದರು, ಮತ್ತು ಅವನನ್ನು ಯಾರೋ ಕೊಂದುಹಾಕಿದರು ಎಂದು ಹೇಳಿದರು. ಅವರ ಈ ದುಷ್ಟತನದ ನಿಮಿತ್ತವಾಗಿಯೂ, ಅವರನ್ನು ಬೆಳೆಸಿ, ರಕ್ಷಣೆಯನ್ನು ನೀಡಿ ತನ್ನ ಜನರನ್ನಾಗಿ ಮಾಡಿಕೊಂಡನು. ಯಾಕೋಬನ ಸಂತಾನದವರು ಐಗುಪ್ತದಲ್ಲಿ ಗುಲಾಮರಾಗಿರುವಾಗ, ದೇವರು ಅವರನ್ನು ಸಂದಿಸಿ ಬಿಡುಗಡೆ ಮಾಡಿದನು. ಫರೋಹನನು ಮತ್ತು ಅವನ ದೇಶಸ್ಥರು ದೇವರಿಗೆ ವಿರುದ್ಧವಾದ ನಿಮಿತ್ತ ಸೃಷ್ಟಿಕರ್ತನಿಂದ ತಕ್ಕ ಶಾಸ್ತಿಯನ್ನು ಹೊಂದಿದರು. ಹೇಗೂ ಬಿಡುಗಡೆಗೊಂಡವರು, ಅವರು ಹೊಂದಿದ್ದನು ಮೆಚ್ಚಿಕೊಳ್ಳಲಿಲ್ಲ, ಅವರು ದೇವರನ್ನು ವಿಶ್ವಾಸಿಸಲಿಲ್ಲ. ಅವರು ಚಿಂತೆಯಲ್ಲಿಯೂ ಮತ್ತು ದೂರನ್ನು ಹೇಳುತ್ತಲೂ ಇದ್ದದ್ದರಿಂದ, ಅವರು ವಾಗ್ದಾನ ದೇಶವನ್ನು ಪ್ರವೇಶಿಸಲಿಲ್ಲ. ಅದರ ಬದಲಾಗಿ, ಅವರ ಮಕ್ಕಳು ಆಕಸನನ್ನು ಗ್ರಹಿಸಿಕೊಂಡರು.

ಪ್ರಾರಂಭದಿಂದಲೂ ಈ ಜೀವನ ಚಕ್ರ ಉರುಳುತ್ತಿತ್ತು; ಸೃಷ್ಟಿ ಮತ್ತು ಆಶೀರ್ವಾದಗಳನ್ನು ಅವಿಧೇಯತೆ ಮತ್ತು ನ್ಯಾಯತೀರ್ಪು ಹಿಂಬಾಲಿಸಿತ್ತು, ಪುನಃ ಸ್ಥಾಪನೆಯು ಹಿಂದೆ ಹೆಚ್ಚು ಅವಿಧೆಯತೆಯು ಇತ್ತು. ಸಕಲ ಸ್ಥಳದ ಮತ್ತು ಎಲ್ಲಾ ಸಮಯದ ಜನರು ತಮ್ಮದೇ ಆದ ಮಾರ್ಗದಲ್ಲಿ ನಡೆದರು, ದೇವರ ಅಧಿಕಾರಕ್ಕೆ ಒಳಗಾಗಲಿಲ್ಲ.

## ಹಳೇ ಒಡಂಬಡಿಕೆಯಲ್ಲಿನ ದೇವರ ನೀತಿಯ ಅಧಿಕಾರ

ಅವಿಧೇಯತೆ ಹಾಗು ದುಷ್ಟತನದ ಕುರಿತಾದ ಮುಂದುವರಿಕೆಯನ್ನು ಬೈಬಲಿನಲ್ಲಿ ಗಮನಿಸಿದ ನಂತರ, ಗ್ರಂಥಗಳು ದೇವರ ನೀತಿಯನ್ನೆ ಮತ್ತು ಅಧಿಕಾರವನ್ನೆ ಪುನಾರಾವರ್ತಿಸುವನು ಎಂಬುದು ಆಶ್ಚರ್ಯವಲ್ಲ, ಅದು ಆತನ ಹಕ್ಕಾಗಿರುತ್ತದೆ. ಉದಾಹರಣೆಗೆ, ಕೀರ್ತನೆ 24:1, 2ರಲ್ಲಿ, “ಭೂಮಿಯೂ ಅದರಲ್ಲಿರುವ ಸಮಸ್ತವೂ ಯೆಹೋವನದು; ಲೋಕವೂ ಅದರ ನಿವಾಸಿಗಳೂ ಆತನವೇ. ಆತನೇ ಅದರ ಅಸ್ತಿವಾರವನ್ನು ಸಾಗರದ ಮೇಲೆ ಹಾಕಿದನು; ಅದನ್ನು ಜಲರಾಶಿಗಳ ಮೇಲೆ ಸ್ಥಿರಪಡಿಸಿದವನು ಆತನೇ.” ಕೆಳಗಿನ ವಾಕ್ಯವು ಈ ಅಂಶವನ್ನು ವಿಸ್ತರಿಸುತ್ತದೆ. ಯೆಶಾಯ 40:21-24:

> ನಿಮಗೆ ತಿಳಿದಿಲ್ಲವೋ? ನೀವು ಕೇಳಲಿಲ್ಲವೋ? ಆದಿಯಿಂದ ನಿಮಗೆ ಉಪದೇಶವಾಗಿ ಬಂದಿಲ್ಲವೋ? ಭೂಮಿಯು ಸ್ಥಾಪಿತವಾದಂದಿನಿಂದ ನೀವು ಗ್ರಹಿಸುತ್ತಿಲ್ಲವೋ? ಭೂಮಂಡಲನಿವಾಸಿಗಳು ಮಿಡತೆಗಳಂತೆ ಸಣ್ಣಗೆ ಕಾಣಿಸುವಷ್ಟು ಉನ್ನತವಾದ ಆಕಾಶದಲ್ಲಿ ಆತನು ಆಸೀನನಾಗಿದ್ದಾನೆ; ಆಕಾಶಮಂಡಲವನ್ನು ನವರುಬಟ್ಟೆಯಂತೆ ಹರಡಿ ನಿವಾಸದ ಗುಡಾರದಂತೆ ಎತ್ತಿ ಕಟ್ಟಿದ್ದಾನೆ. ಪ್ರಭುಗಳನ್ನು ನಿರ್ನಾಮ ಮಾಡುತ್ತಾನೆ, ಭೂಪತಿಗಳನ್ನು ಶೂನ್ಯಗೊಳಿಸುತ್ತಾನೆ. ಇವರು ನೆಡಲ್ಪಟ್ಟ ಕೂಡಲೆ, ಬಿತ್ತಲ್ಪಟ್ಟ ಕ್ಷಣವೇ, ಇವರ ಸಂತಾನವು ಭೂಮಿಯಲ್ಲಿ ಬೇರೂರಿದಾಗಲೇ, ಆತನ ಶ್ವಾಸದಿಂದ ಬಾಡುವರು, ಬಿರುಗಾಳಿಯು ಇವರನ್ನು ಒಣಹುಲ್ಲಿನಂತೆ ಬಡಿದುಕೊಂಡು ಹೋಗುವದು.

ದೇವರ ನ್ಯಾಯಯುತವಾದ ಹಕ್ಕುಗಳು, ಆಜ್ಞೆಗಳಿಗೆ ಮೂಲವಾಗಿದ್ದವು ಎಂದು ಹಳೇ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ. ದೇವರು ಅದನ್ನು ಅವರಿಗೆ ನೀಡಿದ್ದನು. ದೇವರು ಇಸ್ರಾಯೇಲ್ಯರಿಗೆ ದಶಾಜ್ಞೆಯನ್ನು ನೀಡಿದಾಗ, ಕರ್ತನೆ ಅವರ ಮೇಲ್ವಿಚಾರಕನಾಗಿದ್ದು ಮತ್ತು ತನ್ನ ಅಧಿಕಾರವನ್ನು ಅವರ ಮೇಲೆ ಚಲಾಯಿಸಲು ಹಕ್ಕುಳ್ಳವನು ಎಂಬ ಸಾಕ್ಷಿಗಳನ್ನು ನೀಡಿದನು. ಉದಾಹರಣೆಗೆ ಜನರು ಸೀನಾಯಿ ಪರ್ವತಕ್ಕೆ ಬಂದಾಗ ಅವರ ಮಾತನ್ನು ಆಲಿಸಿರಿ. ಅವರು ಆಜ್ಞೆಗಳನ್ನು ಸ್ವೀಕಾರ ಮಾಡಿಕೊಳ್ಳುವದಕ್ಕಾಗಿ ಸಿದ್ಧರಾಗುತ್ತಿದ್ದರು:

> ಅವರು ರೆಫೀದೀಮನ್ನು ಬಿಟ್ಟು ಆ ಅರಣ್ಯಕ್ಕೆ ಬಂದಾಗ ಅಲ್ಲಿ ಬೆಟ್ಟಕ್ಕೆ ಎದುರಾಗಿ ಇಳುಕೊಂಡರು. ಮೋಶೆ ಬೆಟ್ಟವನ್ನೇರಿ ದೇವರ ಸನ್ನಿಧಿಗೆ ಹೋದಾಗ ಯೆಹೋವನು ಅವನಿಗೆ ಬೆಟ್ಟದ ಮೇಲಿನಿಂದ ಕೂಗಿ ನೀನು ಯಾಕೋಬನ ಮನೆತನದವರಾದ ಇಸ್ರಾಯೇಲ್ಯರಿಗೆ ಈ ಮಾತುಗಳನ್ನು ಹೇಳಬೇಕು; ಏನೆಂದರೆ - ನಾನು ಐಗುಪ್ತ್ಯರಿಗೆ ಏನು ಮಾಡಿದೆನೋ, ಹದ್ದು ತನ್ನ ಮರಿಗಳನ್ನು ರೆಕ್ಕೆಗಳ ಮೇಲೆ ಹೊತ್ತುಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ನನ್ನ ಸ್ಥಳಕ್ಕೆ ಹೇಗೆ ಸೇರಿಸಿದನೋ ಇದನ್ನೆಲ್ಲಾ ನೀವು ನೋಡಿದ್ದೀರಷ್ಟೆ. ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಂಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯಜನರಾಗುವಿರಿ. ಸಮಸ್ತ ಭೂಮಿಯೂ ನನ್ನದಷ್ಟೆ. ನೀವು ನನಗೆ ಯಾಜಕರಾಜ್ಯವೂ ಪರಿಶುದ್ಧ ಜನವೂ ಆಗಿರುವಿರಿ. ಇವೇ ನೀನು ಇಸ್ರಾಯೇಲ್ಯರಿಗೆ ಹೇಳಬೇಕಾದ ಮಾತುಗಳು ಎಂದನು (ವಿಮೋಚನಕಾಂಡ 19:2-6).

ದಶಾಜ್ಞೆಗಳನ್ನು ಹೊಂದಿಕೊಳ್ಳುವ ಮೊದಲು ಅದನ್ನು ನೀಡುವಲ್ಲಿ ಇರುವ ದೇವರ ಹಕ್ಕಿನ ಕುರಿತಾಗಿ ಮೋಶೆಯು ಅದರ ಸಾರಾಂಶವನ್ನು ನೀಡಿದನು "ನೀನು ದಾಸತ್ವದಲ್ಲಿದ್ದ ಐಗುಪ್ತದೇಶದೊಳಗಿಂದ ನಿನ್ನನ್ನು ಬಿಡುಗಡೆ ಮಾಡಿದ ಯೆಹೋವನು ಎಂಬ ನಿನ್ನ ದೇವರು ನಾನೇ" (ವಿಮೋಚನಕಾಂಡ 20:2). ನೀನು ದಾಸತ್ವದಲ್ಲಿದ್ದ ಐಗುಪ್ತ ದೇಶದೊಳಗಿಂದ ನಿನ್ನನ್ನು ಬಿಡುಗಡೆ ಮಾಡಿದ ಕರ್ತನು ಎಂಬ ನಿನ್ನ ದೇವರು ನಾನೇ. ದೇವರು ತನ್ನ ಆಜ್ಞೆಗಳ ಪಟ್ಟಿಯನ್ನು ನೀಡಿದ ನಂತರ, ದೇವರು ತನ್ನ ಪ್ರಭಾವವನ್ನು ತೋರಿದನು:

> ಆ ಗುಡುಗುಮಿಂಚುಗಳನ್ನೂ ತೂತೂರಿ ಧ್ವನಿಯಾಗುತ್ತಿರುವದನ್ನೂ ಬೆಟ್ಟದಿಂದ ಹೊಗೆ ಹೊರಡುವದನ್ನೂ ಜನರೆಲ್ಲರು ನೋಡಿ ನಡುಗುತ್ತಾ ದೂರದಲ್ಲಿ ನಿಂತುಕೊಂಡರು. ಅವರು "ಮೋಶೆಗೆ - ನೀನೇ ನಮ್ಮ ಸಂಗಡ ಮಾತಾಡು; ನಾವು ಕೇಳುವೆವು. ದೇವರು ನಮ್ಮ ಸಂಗಡ ಮಾತಾಡಿದರೆ ನಾವು ಸತ್ತೇವು" ಎಂದು ಹೇಳಿದರು. ಅದಕ್ಕೆ ಮೋಶೆ - "ಭಯಪಡಬೇಡಿರಿ. ದೇವರು ನಿಮ್ಮನ್ನು ಪರೀಕ್ಷಿಸಬೇಕೆಂತಲೂ ತನಗೆ ಭಯಪಟ್ಟು ನೀವು ಪಾಪವನ್ನು ಮಾಡದೆ ಇರಬೇಕೆಂತಲೂ ಬಂದಿದ್ದಾನೆ ಅಂದನು" (ವಿಮೋಚನಕಾಂಡ 20:18-20).

ನಾವು ಹಳೇ ಒಡಂಬಡಿಕೆಯನ್ನು ಹಾದು ಬರುವಾಗ, ದೇವರು ಅವರ ಮೇಲೆ ಅಧಿಕಾರ ಹೊಂದಿರುವದನ್ನು ಅವರು ಅರಿಯಲು ಒಡಂಬಡಿಸಿದನು. ಆತನು ತನ್ನ ಅಧಿಕಾರವಿದೆ ಎಂಬ ಸವಾಲನ್ನು ಹೊಂದಿರುವನು. ಆತನ ಕಟ್ಟಳೆಗೆ ಒಳಗಾಗದೆ ಇರುವಾಗ ಅವರನ್ನು ಶಿಕ್ಷಿಸಿದನು. ಮತ್ತು ಆತನ ನಿರ್ದಿಷ್ಟವಾದ ಶರತ್ತುಗಳನ್ನು ಮೀರಿದಾಗಲೂ ಅವರು ಶಿಕ್ಷೆಗೆ ಒಳಗಾದರು. ಯಾಜಕಕಾಂಡ 10:1, 2, ಆ ದಿವಸಗಳಲ್ಲಿದ್ದ ಯಾಜಕರಾದ ನಾದಾಬ್ ಅಬೀಹು ಎಂಬುವರು, ದೇವರ ನಿಯಮಕ್ಕೆ ಬಾಹಿರವಾದ ಬೆಂಕಿಯನ್ನು ಯಜ್ಞದಲ್ಲಿ ಉಪಯೋಗಿಸಿದ್ದರಿಂದ, ಅವರು ದೇವರ ತೀರ್ಪಿಗೆ ಒಳಗಾದರು. 1 ಸಮುವೇಲ 13:7-14, ಸೌಲನು ಹಿಂದಿನ ಯುದ್ಧದಲ್ಲಿ ಅಪಜಯಗೊಂಡಿದ್ದರಿಂದ, ಪುನಃ ಯುದ್ಧಕ್ಕೆ ಹೊರಡಲು ಅಗತ್ಯವಾದ ಯಜ್ಞವನ್ನು ಸಮರ್ಪಿಸುವುದಕ್ಕೆ ಸಮುವೇಲನಿಗಾಗಿ ಕಾಯದೆ ಹೋದದರಿಂದ (1 ಸಮುವೇಲ

10:8) ಸೌಲನು ತನ್ನ ಅಧಿಕಾರವನ್ನು ಮತ್ತು ರಾಜ್ಯವನ್ನು ಕಳಕೊಂಡನು. 1 ಸಮುವೇಲ 15ರಲ್ಲಿ ಅವನು ಒಳ್ಳೆಯ ಮನೋಭಾವದಿಂದಲೇ ಉತ್ತಮವಾದ (ವಚನಗಳು 9, 15), ಕುರಿದನಗಳನ್ನು ಉಳಿಸಿಕೊಂಡನು - ಮತ್ತು ಅಮಾಲೇಕ್ಯರ ಅರಸನನ್ನು ಉಳಿಸಿದನು. ಅದು ಅವನು ಹೊಂದಿದ್ದ ಅಪ್ಪಣೆಗೆ ವಿರುದ್ಧವಾಗಿತ್ತು. ವಚನ 22 ಮತ್ತು 23ರಲ್ಲಿ, ಎಲ್ಲದರಲ್ಲಿ ಆತನ ಜನರು ವಿದೇಯರಾಗಬೇಕಿತ್ತು, ಮತ್ತು ದೇವರು ಅವಿಧೇಯತೆಯನ್ನು ಸಹಿಸುವದಿಲ್ಲ:

> ಸಮುವೇಲನು ಅವನಿಗೆ,
> "ದೇವರು ವಿಧೇಯತೆಗಿಂತಲು ಯಜ್ಞಹೋಮಗಳನ್ನು ಮೆಚ್ಚುವನೇ?
> ದೇವರು ವಿಧೇಯತೆಗೆ ಮೆಚ್ಚುವಷ್ಟು
> ಯಜ್ಞ ಹೋಮಗಳಿಗೆ ಮೆಚ್ಚುವವನಲ್ಲ ಅಂದನು ..."

ಸೌಲನಿಗೆ ಈ ವಿಷಯವು ಮೊದಲೆ ತಿಳಿದಿತ್ತು. ಧರ್ಮೋಪದೇಶಕಾಂಡ 12:32ರಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ: "ನಾನು ನಿಮಗೆ ಆಜ್ಞಾಪಿಸುವದನ್ನೆಲ್ಲಾ ನೀವು ಅನುಸರಿಸಲೇಬೇಕು; ಅದಕ್ಕೆ ಏನು ಕೂಡಿಸಬಾರದು; ಅದರಿಂದ ಏನು ತೆಗೆದುಬಿಡಬಾರದು."

ಮನುಷ್ಯರು ಯಾವ ರೀತಿಯಲ್ಲಿ ಜೀವಿಸಬೇಕೆಂದು ಬೋಧಿಸುವ ಹಕ್ಕು ದೇವರಿಗೆ ಇರುವದು ಎಂದು ಒತ್ತಿ ಹೇಳಲಾಗಿದೆ. ಯೆರೆಮಿಯಾ 10:23ರಲ್ಲಿ "... ಮಾನವನ ಮಾರ್ಗವು, ಅವನ ಸ್ವಾದೀನದಲ್ಲಿಲ್ಲವೆಂದು ನನಗೆ ಗೊತ್ತು, ಮನುಷ್ಯನು ನಡೆದಾಡುತ್ತಾ ಸರಿಯಾದ ಕಡೆಗೆ ತನ್ನ ಹೆಜ್ಜೆಯನ್ನಿಡಲಾರನು."

## ಹೊಸ ಒಡಂಬಡಿಕೆಯಲ್ಲಿರುವ ಕ್ರಿಸ್ತನ ಅಧಿಕಾರದ ನೀತಿ (ಹಕ್ಕು)

ಹೊಸ ಒಡಂಬಡಿಕೆಯಲ್ಲಿಯೂ ಇದೇ ವಿಧವಾಗಿ ಒತ್ತು ನೀಡಲಾಗಿದೆ, ಅದರಲ್ಲಿ ಒಂದು ಪ್ರಮುಖವಾದ ಬದಲಾವಣೆ ಇದೆ. ಯೇಸು ಕ್ರಿಸ್ತನು ಮರಣದಿಂದ ಪುನರುತ್ಥಾನ ಹೊಂದಿದ್ದರಿಂದ ಆತನಿಗೆ ಸರ್ವ "ಅಧಿಕಾರವನ್ನು" ನೀಡಲಾಗಿದೆ (ರೋಮಾಪುರ 1:4 ನೋಡಿರಿ). ಅದು ಪರಲೋಕ ಭೂಲೋಕದಲ್ಲಿನ ಅಧಿಕಾರವೂ ಆಗಿದೆ (ಮತ್ತಾಯ 28:18ಬಿ). ಆತನು ಅಧಿಕಾರವುಳ್ಳವನಾಗಿರುವದಿಂದ, ನಮ್ಮ ಪುನರುತ್ಥಾನದವರೆಗೆ ಆತನನ್ನೆ "ಕರ್ತನು ಮತ್ತು ಕ್ರಿಸ್ತನು" (ಅಪೊಸ್ತಲರ ಕೃತ್ಯಗಳು 2:36) ಎಂದು ಅನುಸರಿಸಬೇಕು, "ಆತನು ತಂದೆಯಾದ ದೇವರಿಗೆ ರಾಜ್ಯವನ್ನು ಒಪ್ಪಿಸುವ ತನಕ" (1 ಕೊರಿಂಥ 15:24ಬಿ).

ಯೇಸುವು ಕರ್ತನು[1] ಒಡೆಯನು ಆಗಿರುವದರಿಂದ ಆತನನ್ನು ಹಿಂಬಾಲಿಸ ಬೇಕು. ಹೊಸ ಒಡಂಬಡಿಕೆಯಲ್ಲಿ ಇದಕ್ಕಿಂತ ಬೇರೆ ವಿಷಯಗಳನ್ನು ಸ್ಪಷ್ಟವಾಗಿ ತಿಳಿಸಿರುವದಿಲ್ಲ. ಯೇಸುವಿನಲ್ಲಿ ಮಾತ್ರ ರಕ್ಷಣೆಯನ್ನು ಪಡೆಯುತ್ತೇವೆ. "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯು ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ" (ಅಪೊಸ್ತಲರಕೃತ್ಯಗಳು 4:12). ನಂಬಿಕೆ ಇಡುವವರು ಮಾತ್ರ ನಿತ್ಯ ಜೀವ ಹೊಂದುವರು (ಯೋಹಾನ 3:16).[2] "ಆತನು ಮಾರ್ಗವು ಸತ್ಯವು ಜೀವವು ಆಗಿರುವನು, ಆತನು ಹೊರತಾಗಿ ಯಾರೂ ದೇವರ ಬಳಿಗೆ ಬರಲು ಸಾಧ್ಯವಿಲ್ಲ" (ಯೋಹಾನ 14:6). ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪು ಮಾಡುವುದು (ಯೋಹಾನ 12:48ಬಿ). ಆತನಲ್ಲಿ ನಂಬಿಕೆ ಇದೆ ಎಂದು ಹೇಳಿ, ಆತನಿಗೆ ವಿಧೇಯರಾಗದೆ ಇರುವವರಿಗೆ "ನಾನೆಂದು ನಿಮ್ಮನ್ನು ಕಾಣೆನು, ಧರ್ಮವನ್ನು ಮೀರಿ ನಡೆಯುವವರೆ ನನ್ನಿಂದ ತೊಲಗಿ ಹೋಗಿರಿ" ಎಂದು ಹೇಳುವ ಹಕ್ಕನ್ನು ಆತನು ಒಡೆಯನಾಗಿರುವದರಿಂದ ಹೇಳಲು ಸಾಧ್ಯವಿದೆ (ಮತ್ತಾಯ 7:23).

ಯೇಸುವಿನ ಪ್ರಭುತ್ವವು ಕೇವಲ ಅಂತಿಮವಾದ ತೀರ್ಪಿಗೂ ಮತ್ತು ನಿತ್ಯತ್ವಕ್ಕೂ ಮಾತ್ರ ಮೀಸಲಾಗಿರುವದಿಲ್ಲ. ಆತನು ಈಗ ಅಧಿಕಾರಯುಕ್ತ ಆಡಳಿತವನ್ನು

ಮಾಡುತ್ತಿರುವದರಿಂದ "ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು. ಸಭೆಯು ಆತನ ದೇಹವಾಗಿದೆ; ಎಲ್ಲವನ್ನು ಎಲ್ಲಾ ಸಂಬಂಧದಲ್ಲಿ ವ್ಯಾಪಿಸುವಾತನಿಂದ ಅದು ಪರಿಪೂರ್ಣತೆಯುಳ್ಳದ್ದಾಗಿದೆ" (ಎಫೆಸ 1:22ಬಿ, 23). ಆತನು ಕರ್ತನಾಗಿರುವದರಿಂದ, "ತನಗೆ ವಿಧೇಯರಾಗಿರುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು" (ಇಬ್ರಿಯ 5:9; ESV). ಆತನ ಪ್ರಭುತ್ವವು, ಹೊಸ ಒಡಂಬಡಿಕೆಯ ಬರಹಗಾರರಿಗೆ, "ಆತನ ಮೂಲಕವೇ ಜಗತ್ತು ಉಂಟಾಯಿತು." ಎಂಬ ಭರವಸವನ್ನು ಪ್ರಬೋಧಿಸಿದ್ದರಿಂದ, ಅವರು ದೇವದೂಷಣೆಯ ಮನಸ್ತಾಪಕ್ಕೆ ಒಳಗಾಗಲಿಲ್ಲ (ಇಬ್ರಿಯ 1:2; ಯೋಹಾನ 1:1-5, ಕೊಲೊಸ್ಸೆ 1:15; 16). ಆದುದರಿಂದ ಪೌಲನು ಧೈರ್ಯವಾಗಿ,

> … ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು ಒಡೆಯನೆಂದು ಪ್ರತಿಜ್ಞೆಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು (ಫಿಲಿಪ್ಪಿಯವರಿಗೆ 2:9ಬಿ-11).[3]

ಯೇಸು ಹೇಳಿದ್ದು, ಯಾವನಾದರು ಆತನನ್ನು ಹಿಂಬಾಲಿಸಿದರೆ, ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವನು (ಯೋಹಾನ 14:15; 15:14). ಆತನ ಕಡೆಗೆ ತಿರುಗಿಕೊಳ್ಳು ವವರು, ಆತನ ಹೆಸರಿನಲ್ಲಿ ಎಲ್ಲವನ್ನು ಮಾಡಿ, ಇತರರು ಸಹ ಆತನ ಹೆಸರಿನಲ್ಲಿ ಎಲ್ಲವನ್ನು ಮಾಡಬೇಕೆಂದು ಹೇಳಬೇಕು, "ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ" (ಮತ್ತಾಯ 28:20ಎ).

## ಮುಕ್ತಾಯ

ಆದಿಯಿಂದಲೂ ಸ್ತ್ರೀ ಪುರುಷರು ದೇವರ ಅಧಿಕಾರಕ್ಕೆ ಒಳಗಾಗುವ ವಿಷಯದಲ್ಲಿ ಹಿಂದೆ ಇರುವರು ಆ ಅಧಿಕಾರವನ್ನು ಈಗ, ಯೇಸು ಹೊಂದಿರುವನು, ಆತನೆ ಕ್ರಿಸ್ತನು. ದೇವರು ಸೃಷ್ಟಿ ಕರ್ತನಾಗಿದ್ದು, ಯೇಸುವಿನ ಪುನರುತ್ಥಾನದಲ್ಲಿ ಎಲ್ಲವನ್ನು ನೂತನ ವಾಗಿ ಮಾಡಿ, ಸರ್ವ ಅಧಿಕಾರಕ್ಕೆ ಆತನೆ ಒಡೆಯನಾಗಿದ್ದಾನೆ ಎಂಬ ದೇವರ ಸ್ವಭಾವ ಮತ್ತು ಆತನ ವಾಕ್ಯವು ದೃಢಪಟ್ಟಿರುತ್ತದೆ. ಆತನ ಅಧಿಕಾರವನ್ನು ತಿರಸ್ಕರಿಸದೆ, ಆತನಿಗೆ ಅಧೀನ ರಾಗಿರೋಣ.

---

ಟಿಪ್ಪಣಿಗಳು

[1]ಯೇಸುವೇ "ಕರ್ತನು" ಎಂಬ ತಲೆ ಬರಹವನ್ನು ಹೊಸ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ. (ಕ್ಯೂರಿಯಸ್) "ರಕ್ಷಕ" ಎಂಬುದಾಗಿರುವದಿಲ್ಲ, "ಕರ್ತನು" ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಇಪ್ಪತ್ನಾಲ್ಕು ಸಾರಿ ನಮೂದಾಗಿದೆ. ಅಂದರೆ ಆತನು ರಕ್ಷಿಸಲಾರನು ಎಂಬ ತಾತ್ಪರ್ಯವಲ್ಲ; "ರಕ್ಷಣೆ" ಎಂಬ ಕ್ರಿಯಾಪದವನ್ನು (ಸೋಜೋ) ಹೊಸ ಒಡಂಬಡಿಕೆಯಲ್ಲಿ ಸುಮಾರು ನೂರು ಸಾರಿ ನಮೂದಾಗಿದೆ, ಯೇಸು ಮಾನವನಿಗೆ ಮಾಡಿದ ಸಕಲ ಕಾರ್ಯಗಳ ಕುರಿತಾಗಿದೆ. ಹಾಗೂ ಆತನಿಗೆ ಯಾವುದು ಹಕ್ಕನ್ನು ಮತ್ತು ರಕ್ಷಣೆ ನೀಡುವ ಸಾಮರ್ಥ್ಯವನ್ನು ನೀಡುತ್ತದೆ? ಅದು ಅವನ ಪ್ರಭುತ್ವವೆ. ಎಲ್ಲಿ ಜನರು ಅಧಿಕಾರವನ್ನು ತಿರಸ್ಕರಿಸುತ್ತಾರೋ, ಅಲ್ಲಿ ಆತನು ಕೇವಲ ರಕ್ಷಕನು ಮಾತ್ರವಲ್ಲ (ಒಳ್ಳೆಯ ರಕ್ಷಕ) ಸ್ನೇಹಿತನೂ ಅಲ್ಲ. ಆತನು ಸತ್ಯವಾದ ಒಡೆಯನಾಗಿದ್ದಾನೆ ಎಂದು ಆತನ ಅನುಯಾಯಿಗಳು ತಿಳಿದುಕೊಳ್ಳಬೇಕು. [2]ಯೋಹಾನ 3:16,ರಲ್ಲಿ ಯಾವನಾದರು ಎಂಬ ಪದವು ಅಪೊಲೋಟ್ಟ ಅಂದರೆ "ನಾಶವಾಗುವನು" ಎಂಬ ಕ್ರಿಯಾಪದದಲ್ಲಿರುತ್ತದೆ ಗ್ರೀಕ್ ಭಾಷೆಯಲ್ಲಿ ಮುಂದೆ ಆಗುವುದು ಎಂಬುದಾಗಿರದೆ, ವರ್ತಮಾನಕಾಲದ "ಆಗುವನು" ಎಂಬುದಾಗಿದೆ KJV, ASV, ESV, RSV

(NRSV ಯಲ್ಲಿರಬಹುದು) ಈ ವ್ಯಾಖ್ಯಾನವು ನಾವು ರಕ್ಷಣೆಯಲ್ಲಿಟ್ಟಿರುವ ಭರವಸೆಯನ್ನು ಭಂಗಪಡಿಸಬಾರದು. ಯೇಸುವಿನ ಮೇಲಿನ ನಂಬಿಕೆಯಿಂದ ರಕ್ಷಣೆಯಾಗುತ್ತದೆ. [3]ಯೇಸುವನ್ನು ಮಹಿಮೆ ಪಡಿಸುವಂತ ವಾಕ್ಯಭಾಗವಾಗಿದೆ. ಯೆಶಾಯ 45:23ಬಿಯಿಂದ ಈ ಪದವನ್ನು ಆರಿಸಲಾಗಿದೆ. ದೇವರನ್ನು ಮಹಿಮೆಪಡಿಸುವ ಹಳೇ ಒಡಂಬಡಿಕೆಯ ವಾಕ್ಯಭಾಗ. ಯುದಾಯದಲ್ಲಿ ಬೆಳೆದ ಪೌಲನು ಒಬ್ಬನೇ ದೇವರಲ್ಲಿ ವಿಶ್ವಾಸವಿಟ್ಟಿದ್ದನು. ಯೋಹಾನನು ಸತ್ಯ ದೇವರು ಎಂದು ಅರಿತಿದ್ದನು. ಇಂಥವನು ಯೇಸುವಿನ ಹೆಸರನ್ನು ಉಪಯೋಗಿಸಿದ್ದರಿಂದ ಲೋಕವು ಅವನನ್ನು ಗಮನಿಸಿತು (ಯೇಸುವಿನ ನಾಮವು ಪ್ರಮುಖವಾಗಿದೆ). ಯೇಸು ಮನುಷ್ಯನು ಮಾತ್ರವಾಗಿರಲಿಲ್ಲ ಎಂದು ಪೌಲನು ತಿಳಿಸಿದನು. John Warwick Montgomery, *History and Christianity: A Vigorous, Convincing Presentation of the Evidence for Historical Jesus* (Minneapolis: Bethany House Publishers, 1965), 50-52.